ಶ್ರೀ ಬಿ.ಎ.ಜೀವಿಜಯ.—ಮಾನ್ಯ ಸದಸ್ಯರು ಗ್ರಾಮಸ್ಥರನ್ನು ಈ ಕೆಲಸಕ್ಕೆತೆಗೆದುಕೊಳ್ಳಬೇಕೆಂದು ಸಲಹೆಯನ್ನು ಮಾಡಿದ್ದಾರೆ. ಅದು ಸ್ವಲ್ಪ ಕಷ್ಟವಾಗುತ್ತದೆ. ಯಾರಿಗೆ ಆದರೂ ಆನೆಗಳು ಯಾವಾಗ ಬರುತ್ತವೆ ಯಾವಾಗ ಹೋಗುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಕಂದಕಗಳನ್ನು ತೋಡಿದ್ದರೂ ಕೂಡ, ಕೆಲವುಕಡೆಗಳಲ್ಲಿ ಗ್ರಾಮಸ್ಥರು ಮುಚ್ಚಿ ಹಾಕಿದ್ದಾರೆ. ಏಕೆಂದರೆ ಅವರ ದನ ಕರುಗಳನ್ನು ಅರಣ್ಯಕ್ಕೆ ಬಿಡಲಿಕ್ಕೋಸ್ಕರ ಅನುಕೂಲವಾಗಲೆಂದು ಇದು ನಪ್ಪುದೊಡ್ಡ ಯೋಜನೆ. ಇದನ್ನು ನಾವು ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇವೆ. ೪೦೦ ಲಕ್ಷ ರೂಪಾಯಿಗಳ ಒಂದು ಯೋಜನೆ, ಇದು ಮಂಜೂರು ಆಗಿ ಬಂದರೆ, ಪ್ರತಿಯೊಂದು ಕಡೆಗಳಲ್ಲಿಯೂ ೫ ಕಿ.ಮೀ. ಕಂದಕಗಳನ್ನು ತೋಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ಕಿ.ಮೀ. ಗೆ ೨೫ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಈ ಕೆಲಸವನ್ನು ನಾವು ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ. ಮತ್ತು ಬಂಡೀಪುರದ ಹತ್ತಿರ ಆನೆಗಳ ಕಾಟ ಹೆಚ್ಚಿಗೆ ಆಗಿರತಕ್ಕಂಥಾದ್ದು ಇದೆ. ಇವು ಅರಣ್ಯವನ್ನು ಕೂಡ ಸ್ವಲ್ಪ ನುಟ್ಟಿಗೆ ನಾಶ ಮಾಡುತ್ತಾ ಇವೆ. ವಿಶೇಷವಾಗಿ ವಂಜನಗೂಡಿಗೆ ಆನೆಗಳು ಹೋಗತ್ತಾ ಇವೆ. ಅಲ್ಲಿ ಇನ್ನೊಂದು ಹೊಸ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಈ ಕೆಲಸಕ್ಕೆ ಎಲಿಕ್ಟ್ರಿಕ್ ತಂತಿಗಳನ್ನು ಬಳಸುವ ಕಾರ್ಯಕ್ರಮ ಇದೆ. ಆದರ ಸಾಧ್ಯಾಸಾಧ್ಯತೆಗಳನ್ನು ನೋಡಿಕೊಂಡು ಪರಿಶೀಲನೆ ಮಾಡಿ ಆದಷ್ಟು ಜಾಗ್ರತಕತೆ ಈ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಟಿ. ಜಯಕುಮಾರ್.—ಈ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟು ೧೫ ದಿವಸಗಳು ಆಗಿವೆ. ಇಷ್ಟರೊಳಗೆ ಅಲ್ಲಿ ಒಂದು ಆನೆ ಒಬ್ಬನನ್ನು ಸಾಯಿಸಿದೆ. ಇನ್ನೊಬ್ಬನು ತಂಳಿತಕ್ಕೆ ಒಳಗಾಗಿ ಕೆ.ಆರ್. ಆಸ್ಪತ್ರೆಯಲ್ಲಿ ಶುಶ್ರೂಷೆಯನ್ನು ಪಡೆಯುತ್ತಿದ್ದಾನೆ. ಜೊತೆಗೆ ಇಲಾಖೆಯವರು ಪರಿಹಾರ ಏನೂ ಕೊಡುತ್ತಿದ್ದಾರೆ, ಕೊಡುವಾಗ ಈ ಅಧಿಕಾರಿಗಳಿಗೆ ರೈತರು ಎಂದರೆ ಏನೋ ಒಂದು ರೀತಿಯ ವೈರತ್ವದ ಭಾವನೆಯನ್ನು ತೋರಿಸುತ್ತಾರೆ. ಪಾನಿಗೊಳಗಾದವರು ಯಾರದಾರೂ ಇವರ ಹತ್ತಿರ ಬಂದು ತಮ್ಮ ಕಷ್ಟವನ್ನು ಹೇಳಿಕೊಂಡರೆ ಬೆಳಿಗ್ಗೆ ನಷ್ಟವಾಗಿದೆ ಎಂದು ಹೇಳಿಕೊಂಡರೆ, ಅವರು ಸಕಾಲದಲ್ಲಿ ಬಂದು ಮಹಜರ್ ಮಾಡುವುದಿಲ್ಲ. ಆಕಸ್ಮತ್ತಾಗಿ ಬಂದರೂ ಕೂಡ ಕಾಟಾಚರಕ್ಕೆ ೧೦ ಸಾವಿರ ರೂಪಾಯಿಗಳ ನಷ್ಟಕ್ಕೆ ೧-೨ ಸಾವಿರ ಎಂದು ಬರೆದುಕೊಂಡು ಬಿಡುತ್ತಾರೆ. ಜೊತೆಗೆ ಪರಿಹಾರ ಕೊಡುವುದಕ್ಕೆ ೬ ತಿಂಗಳು, ವರ್ಷಗಟ್ಟಲೆ ಕಾಯಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸಚಿವರು ಹೆಚ್ಚಿಗೆ ಆಸಕ್ತಿಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸದಸ್ಯರ ಸೂಚನೆಯನ್ನು ಒಪ್ಪಿಕೊಳ್ಳುತ್ತೇನೆ.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—ಈಗ ನಿಯಮ ೩೫೪ ರ ಮೇರೆಗೆ

ಬೀಳಗಿಯ ಘಟಪ್ರಭಾ ಎಡದಂಡೆಯ ಕಾಲುವೆ ವಿಭಾಗದ ಕಛೇರಿಗೆ ಕಾರ್ಯನಿರ್ವಾಹಕ ಅಭಿಯಂತರರನ್ನು ಇಲ್ಲವೆ ನೇಮಿಸುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನನ್ನ ಕ್ಷೇತ್ರವಾದ ಬೀಳಗಿಯಲ್ಲಿ ಘಟಪ್ರಭ ಎಡದಂಡೆ ಕಾಲುವೆಯ ಒಂದು ವಿಭಾಗ ಕಛೇರಿ ಇದೆ. ಇದರ ಕಾರ್ಯವ್ಯಾಪ್ತಿಯಲ್ಲಿ ಮುಧೋಳ್, ಬೀಳಗಿ, ಎಡಹಳ್ಳಿ, ಕಾತರಕಿ, ಹೀಗೆ ನಾಲ್ಕು ಉಪವಿಭಾಗಗಳು ಇವೆ. ಬೀಳಗಿ ವಿಭಾಗಕ್ಕೆ ಒಬ್ಬ ಕಾರ್ಯನಿರ್ವಾಹಕ ಅಭಿಯಂತರರು ಇದ್ದು, ಇವರು ನೀರಾವರಿಯ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕಾಗುತ್ತದೆ.

ದುರ್ದೈವದ ಸಂಗತಿಯೆಂದರೆ ೧೧ ತಿಂಗಳಿಂದ ಬೀಳಗಿ ವಿಭಾಗಕ್ಕೆ ಒಬ್ಬ ಕಾರ್ಯನಿವಾಹಕ ಅಭಿಯಂತರು ಇಲ್ಲ. ಹೀಗಾಗಿ ಬೀಳಗಿ ವಿಭಾಗದ ನೀರಾವರಿ ಕಾರ್ಯಗಳಿಗೆ ಮತ್ತು ನೀರಾವರಿಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಗಳಿಗೆ ಅತ್ಯಂತ ತೊಂದರೆಯಾಗಿದೆ. ಬೀಳಗಿಯು ಜಿ.ಎಲ್.ಜಿ.ಸಿ. ಯ ಕೊನೆಯ ಎಂದರೆ ಟೇಲೆಂಡ್ ಭಾಗವೆಂದು ಪರಿಗಣಿಸಲ್ಪಟ್ಟಿದ್ದರ್ದ, ಇಲ್ಲಿ ದೀರ್ಘಕಾಲ ಒಬ್ಬ ಕಾರ್ಯನಿರ್ವಾಹಕ ಅಭಿಯಂತರರು ಇರದೆ ಇರುವುದು ಅನೇಕ ತೊಂದರೆಗಳಿಗೆ ದಾರಿ ಮಾಡಿಕೊಟ್ಟಿದೆ.

ಒಬ್ಬ ಕಾರ್ಯನಿರ್ವಾಹಕ ಅಭಿಯಂತರರನ್ನು ಬೇಳಗಿಗೆ ವರ್ಗಾಯಿಸುವ ಕುರಿತು ನಾನು ಸಂಬಂಧಿಸಿದ ಇಲಾಖೆಗೆ ಅನೇಕ ಸಲ ಮನವಿ ಮಾಡಿದ್ದೇನೆ. ಮಾರ್ಚ್, ಏಪ್ರಿಲ್, ಹಾಗೂ ಜೂನ್ ತಿಂಗಳಲ್ಲಿ ಅಲ್ಲಲ್ಲಿ ದೊಡ್ಡಪ್ರಮಾಣದಲ್ಲಿ ಕಾಲುವೆಗಳ ರಿಪೇರಿ ಆಗಬೇಕಾಗಿದೆ. ಇದಕ್ಕೆ ಬೇಕಾದ ಹಣವನ್ನು ಸರ್ಕಾರವು ಮಂಜೂರು ಕೂಡ ಮಾಡಿದೆ. ಈಗ ಅಲ್ಲಿ ಹನ್ನೊಂದು ತಿಂಗಳಿಂದ ಇರುವ ಕಾರ್ಯನಿರ್ವಾಹಕ ಅಭಿಯಂತರರವರ ಆಪ್ತಸಹಾಯಕರಿಂದ ಈ ಎಲ್ಲಾ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗುವುದು ಸಾಧ್ಯವಿಲ್ಲ.

ಕಾರಣ ಕೂಡಲೇ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಜಿ.ಎಲ್.ಜಿ.ಸಿ ಯ ಬೇಳಗಿ ವಿಭಾಗಕ್ಕೆ ಓರ್ವ ಧಕ್ಷ, ಪ್ರಾಮಾಣಿಕ, ಹಾಗೂ ಅನುಭವಿ ಕಾರ್ಯನಿರ್ವಾಹಕ ಅಭಿಯಂತರರನ್ನು ವರ್ಗಾಯಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಅವರ ಗಮನ ಸೆಳೆಯು ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳವರಿಂದ ಉತ್ತರವನ್ನು ತರಿಸಿ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

(ii) ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಿಂದ ಕೆ.ಇ.ಬಿ.ಗೆ ಕಟ್ಟಬೇಕಾದ ೫೨ ಕೋಟಿ ರೂಪಾಯಿಗಳ ಬಾಕಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯವರು ಕೆ.ಇ.ಬಿ. ಗೆ ಕಟ್ಟಬೇಕಾದ ಸುಮಾರು ೫೨ ಕೋಟಿ ರೂಪಾಯಿಗಳ ಬಾಕಿಯಲ್ಲಿ ದಿನಾಂಕ ೧೭-೩-೧೯೮೬ ರೊಳಗೆ ಕನಿಷ್ಟ ೧೦ ಕೋಟಿ ರೂಪಾಯಿಗಳಾದರೂ ಬಾಕಿ ಕಟ್ಟದಿದ್ದರೆ ವಿದ್ಯುತ್ ಕೊಡುವುದನ್ನು ನಿಲ್ಲಿಸುವುದಾಗಿ ಕೆ.ಇ.ಬಿ. ಅಧ್ಯಕ್ಷರಿಂದ ನೋಟೀಸ್ ಕಳಿಸಿರುವುದು ನಿಜವೇ? ಈ ಕಾರಣಕ್ಕಾಗಿ ದಿನಾಂಕ ೧೭-೩-೧೯೮೬ ರಂದು ಬೆಳಿಗ್ಗೆ ೯ ಇಂದ ಸಾಯಂಕಾಲ ೫ ಗಂಟೆವರೆಗೆ ಒಂದು ದಿನದ ಉತ್ಪತ್ತಿ ನಿಂತಿರುವುದು ನಿಜವೆ ? ಸರ್ಕಾರಿ ಸ್ವಾಮ್ಯದಲ್ಲಿ ಇರುವ ಇಂತಹ ಕಾರ್ಖಾನೆಯಲ್ಲಿ ಉತ್ಪತ್ತಿ ಆಗುವ ಸಿಮೆಂಟ್, ಕಬ್ಬಿಣ, ಇತ್ಯಾದಿ ವಸ್ತುಗಳು ಕೆ.ಇ.ಬಿ.ಗೂ ಅವಶ್ಯಕತೆ ಇದ್ದು ಇಂತಹ ಸಾಮಾನುಗಳನ್ನು ಖರೀದಿ ಮಾಡಿ ವಿದ್ಯುಚ್ಛಕ್ತಿ ಬಾಕಿಗೆ ವಜಾಮಾಡಲು ಬರುವುದಿಲ್ಲವೇ? ಈ ರೀತಿಯಾ ಸರ್ಕಾರದ ನೀತಿಯಿಂದ ಪರೋಕ್ಷವಾಗಿ ವಿ.ಐಸ್.ಐ.ಎಲ್.ನ್ನು ಮುಚ್ಚಲು ಸರ್ಕಾರವೆ ಪ್ರಯತ್ನಿಸುತ್ತಿರುವುದಾಗಿ ಸಾರ್ವಜನಿಕರಲ್ಲಿ ಸಂದೇಹ ಮೂಡಿರುವ ಈ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯು ಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ಕೈಗಾರಿಕಾ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಕೆ.ಇ.ಬಿ ಇಲಾಖೆಯವರು ನೋಟೀಸ್ ಕೊಟ್ಟಿದ್ದುದ ನಿಜ. ಆದರೆ ಸರ್ಕಾರ ಆ ಕೈಗಾರಿಕೆಯನ್ನು ಮುಚ್ಚಬೇಕೆನ್ನುವ ಉದ್ದೇಶ ಇಲ್ಲ. ಈಗಾಗಲೇ ನಮ್ಮ ಕೈಗಾರಿಕಾ ಸೆಕ್ರೆಟರಿಯವರು ಕೆ.ಇ.ಬಿ. ಛೇರ್ಮನ್ ರವರ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ೧೭ನೇ ತಾರೀಖು ಫ್ಯಾಕ್ಟರಿಯಲ್ಲಿ ಕೆಲಸ ನಿಂತಿಲ್ಲ ನಡೆದಿದೆ. ಅಲ್ಲಿ ಪ್ರೊಡಕ್ಷನ್ ಸಹ ಆಗಿದೆ.

iii) ಹೆಗ್ಗಡದೇವನ ಕೋಟೆಯಲ್ಲಿ ಕಾಡಾನೆಗಳ ಹಾವಳಿ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಇತ್ತೀಚೆಗೆ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದರಿಂದ ತಾಲ್ಲೂಕಿನ ಜನರು ಗಾಬರಿಯಿಂದ ತತ್ತರಿಸಿ ಹೋಗಿದ್ದಾರೆ. ಅಲ್ಲಿ ಪ್ರತಿ ವಾರಕ್ಕೊಂದರಂತೆ ಪ್ರಾಣ ಹಾನಿ ಉಂಟಾಗುತ್ತಿದೆ. ಕಳೆದ ತಿಂಗಳು ಈ ತಾಲ್ಲೂಕಿನ ಸತ್ತಿಗೆ ಹುಂಡಿ ಹತ್ತಿರ ರಸ್ತೆಯಲ್ಲಿ ಹೋಗುತ್ತಿದ್ದ ೨೬ ವರ್ಷದ ವ್ಯಕ್ತಿಯೊಬ್ಬನು ಸಾವಿಗೀಡಾಗಿದ್ದಾನೆ. ತಾರೀಖು ೧೨-೨-೧೯೮೬ರಂದು ಮಧ್ಯಾಹ್ನ ೩ ಗಂಟೆಗೆ ಸುಮಾರು ೧೭ ವರ್ಷದ ವಂಸಿಯಮ್ಮ ಎಂಬ ಹೆಣ್ಣು ಮಗಳೊಬ್ಬಳು ತಾರಕಾ ಅಣೆಕಟ್ಟೆಯ ಹತ್ತಿರ ಐದಾರು ಹೆಂಗಳೆಯರೊಡನೆ ಹುಣಸಕುಪ್ಪೆ ಗ್ರಾಮಕ್ಕೆ ಹೋಗುತ್ತಿದ್ದಾಗ ಆನೆ ತುಳಿತದಿಂದ ಸಾವಿಗೀಡಾದಳು, ಮತ್ತು ತಾರೀಖು ೧೩-೩-೧೯೮೬ರಂದು ಮಧ್ಯಾಹ್ನ ೧-೦೦ ಗಂಟೆ ಸಮಯದಲ್ಲಿ ವೆಂಕಟಲಕ್ಷ್ಮಮ್ಮ ಎಂಬಾಕೆಯು ಹುಣಸೂರಿನಿಂದ ಬಂದು ಕಂದಲಕೆ ಹೋಬಳಿ ಶಿವಪುರಕ್ಕೆ ಹೋಗುತ್ತಿದ್ದಾಗ ಪಾಟಕೆರೆ ಎಂಬ ಗ್ರಾಮದ ಬಳಿ ಆನೆ ತುಳಿತದಿಂದ ಸಾವಿಗೀಡಾಗಿದ್ದಾಳೆ. ಇತ್ತೀಚೆಗೆ ನಾಲ್ಕೈದು ದಿನಗಳ ಹಿಂದೆ ಮೂರು ಆನೆಗಳು